**ಮೆ: ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, (ಎಸ್‌ಎಚ್‌ಎಸ್‌ಎಸ್‌ಕೆಎಲ್) ಇವರು ಶಂಕರಾನಂದ ನಗರ, ಯಮಗರ್ನಿ ಗ್ರಾಮ, ನಿಪ್ಪಾಣಿ, ನಿಪ್ಪಾಣಿ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕದಲ್ಲಿ ಹೊಸ 50 ಕೆಎಲ್‌ಪಿಡಿ ಸಾಮರ್ಥ್ಯದ ಮೊಲಾಸಿಸ್ ಆಧಾರಿತ ಡಿಸ್ಟಿಲರಿ (ಎಥೆನಾಲ್) ಸ್ಥಾವರವನ್ನು ಸ್ಥಾಪಿಸಿಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ವಿಸ್ತರಣೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.**

**ದಿನಾಂಕ :** 16-07-2020.

**ವೇಳೆ** : ಬೆಳಿಗ್ಗೆ 11:00 ಘಂಟೆ,

**ಸ್ಥಳ** : ಮೆ: ಶ್ರೀ. ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, (ಎಸ್‌ಎಚ್‌ಎಸ್‌ಎಸ್‌ಕೆಎಲ್) ಶಂಕರಾನಂದ ನಗರ, ಯಮಗರ್ನಿ ಗ್ರಾಮ, ನಿಪ್ಪಾಣಿ, ನಿಪ್ಪಾಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ.

ಶ್ರೀ. ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, (ಎಸ್‌ಎಚ್‌ಎಸ್‌ಎಸ್‌ಕೆಎಲ್) ಇವರು ಶಂಕರಾನಂದ ನಗರ, ಯಮಗರ್ನಿ ಗ್ರಾಮ, ನಿಪ್ಪಾಣಿ, ನಿಪ್ಪಾಣಿ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕದಲ್ಲಿ ಹೊಸ 50 ಕೆಎಲ್‌ಪಿಡಿ ಸಾಮರ್ಥ್ಯದ ಮೊಲಾಸಿಸ್ ಆಧಾರಿತ ಡಿಸ್ಟಿಲರಿ(ಎಥೆನಾಲ್) ಸ್ಥಾವರವನ್ನು ಸ್ಥಾಪಿಸಿಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 16-07-2020 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಮೆ: ಶ್ರೀ. ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, (ಎಸ್‌ಎಚ್‌ಎಸ್‌ಎಸ್‌ಕೆಎಲ್) ಶಂಕರಾನಂದ ನಗರ, ಯಮಗರ್ನಿ ಗ್ರಾಮ, ನಿಪ್ಪಾಣಿ, ನಿಪ್ಪಾಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-5 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವ ದೆಹಲಿ, ಇವರು ಸದರಿ ಯೋಜನೆಯ **Standards Terms of Reference** ಅನ್ನು ದಿನಾಂಕ 29-11-2018 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರುವಂತೆ **ಮೆ: ಶ್ರೀ. ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್,**

**(ಎಸ್‌ಎಚ್‌ಎಸ್‌ಎಸ್‌ಕೆಎಲ್) ಶಂಕರಾನಂದ ನಗರ, ಯಮಗರ್ನಿ ಗ್ರಾಮ, ನಿಪ್ಪಾಣಿ, ನಿಪ್ಪಾಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ** ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 25-11-2019 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪತ್ರಿಕೆಗಳಾದ **"ವಿಜಯ ವಾಣಿ"** (ಕನ್ನಡ) ಮತ್ತು ಇಂಡಿಯನ್ ಎಕ್ಸಪ್ರೆಸ್" (ಆಂಗ್ಲ ಭಾಷೆ)ಯಲ್ಲಿ ದಿನಾಂಕ: 16-06-2020 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ **"ಕನ್ನಡಮ್ಮ"** ದಿನ ಪತ್ರಿಕೆಯಲ್ಲಿ ದಿನಾಂಕ: 18-06-2020 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 16-07-2020 ರಂದು ಬೆಳಿಗ್ಗೆ 11:00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಜಗದೀಶ. ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು **ಶ್ರೀ ಅಶೋಕ ದುಡಗುಂಟಿ,** ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಮತ್ತು ನಿಪ್ಪಾಣಿ ತಹಶೀಹಲ್ದಾರ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಹತ್ತು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ವಸಂತದಾದಾ ಶುಗರ್ ಇನ್ಸಿಟ್ಯೂಟ್, ಪರಿಸರ ಅಭಿಯಂತರು, ಸಲಹೆ ಮತ್ತು ವಿಶ್ಲೇಷಕ, ಪುಣೆ, ಮಾಂಜರಿ (ಬಿಕೆ), ತಾಲ್ಲೂಕ:ಹವೇಲಿ, ಜಿಲ್ಲೆ: ಪುಣೆ, ಮಹಾರಾಷ್ಟ್ರನವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

1. **ಶ್ರೀ ಸುಭಾಶ ಮಗದುಮ್: ಆಡಿ ಗ್ರಾಮ.**

   ಕೈಗಾರಿಕೆ ಆವರಣದಲ್ಲಿ ಹಮ್ಮಿಕೊಂಡಿರುವ ಪರಿಸರ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಮುಖ್ಯವಾಗಿ ಕಾರ್ಖಾನೆಯವರು, ಆಡಳಿತ ಮಂಡಳಿಯವರು ಈ ಸ್ಥಾಪನೆಗೋಸ್ಕರ ಮಾಡಿರುವ ಪ್ರಸ್ತಾವನೆಯು ಬಹಳ ಸಂತೋಷ ಎಂದು ಹೇಳಲಿಕ್ಕೆ ಇಷ್ಟ ಪಡುತ್ತಿನಿ, ಈ ಡಿಸ್ಟಿಲರಿ ಘಟಕವನ್ನು ಸ್ಥಾಪನೆ ಮಾಡುವದರಿಂದ ಸುಮಾರು 90% ಲಾಭ ಆಗುತ್ತದೆ. ಜೊತೆಗೆ ಈ ಕಾರ್ಖಾನೆ ರೈತರ ಅಭಿವೃದ್ಧಿ ಹಿತವನ್ನು ಕಾಪಾಡುವುದರ ಬಗ್ಗೆ ಒಂದು ವ್ಯವಸ್ಥೆಯನ್ನು ಇಲ್ಲಿ ಕಾಣುತ್ತೇವೆ. ಮುಖ್ಯವಾಗಿ ಇವತ್ತು 50KLPD ಡಿಸ್ಟಿಲರಿ ಘಟಕದ ಸ್ಥಾಪನೆಗೋಸ್ಕರ ಅತ್ಯಾಧುನಿಕ ಟೆಕ್ನಾಲಾಜಿ ಬಳಸಿ Incineration Boiler ಹಾಕುವುದರಿಂದ ಸಂಪೂರ್ಣ ಅಭಿವೃದ್ಧಿಗೊಳಿಸುವಲ್ಲಿ, ಉತ್ಪಾದನೆಮಾಡುವಲ್ಲಿ ನಮ್ಮ ಕಾರ್ಖಾನೆ ಪಾತ್ರವಾಗುತ್ತದೆ ಅಂತ ಹೇಳಲು ಇಚ್ಚೆ

ಪಡುತ್ತೇನೆ. ಅದೇ ರೀತಿಯಾಗಿ ಈ ಘಟಕ ಸ್ಥಾಪನೆ ಆಗುವುದರಿಂದ ನಮ್ಮ ಸ್ಥಳೀಯ ಯುವಕರಿಗೆ ಉದ್ಯೋಗ ಕೂಡಾ ದೊರೆಯುತ್ತದೆ. ಜೊತೆಗೆ ಈ ಘಟಕ ಸ್ಥಾಪನೆ ಮಾಡುವುದರಿಂದ ಇಥನಾಲ್ ಉತ್ಪಾದನೆ ಮಾಡುವುದರಿಂದ, ಯಾವುದೇ ರೀತಿ ತೊಂದರೆ ಆಗಲ್ಲ ಅಂತ ಹೇಳುತ್ತಾ ಈ ಕಾರ್ಖಾನೆ ಮಂಡಳಿಯವರು ಸ್ಥಾಪನೆ ಮಾಡಲು ಉದ್ದೇಶಿಸಿರುವ ಡಿಸ್ಟಿಲರಿ ಘಟಕಕ್ಕೆ ಅನುಕೂಲ ಮಾಡಿ ಕೊಡಬೇಕೆಂದು ನಮ್ಮೆಲ್ಲರ ಕಡೆಯಿಂದಾ ವಿನಂತಿಸಿಕೊಳ್ಳುತ್ತೇನೆ.

2. **ಶ್ರೀ ಓಂಕಾರ ಪಾಟೀಲ: ರಾಮಪೂರ ಗ್ರಾಮ.**

ಈ 50KLPD ಡಿಸ್ಟಿಲರಿ ಘಟಕವನ್ನು ಸ್ಥಾಪನೆ ಮಾಡುತ್ತಿರುವುದಕ್ಕಾಗಿ ಫ್ಯಾಕ್ಟರಿ ಆಡಳಿತ ಮಂಡಳಿಯವರಿಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ಈ 50KLPD ಡಿಸ್ಟಿಲರಿ ಘಟಕದಿಂದ ಫ್ಯಾಕ್ಟರಿಗೆ ಮುಂದಿನ ದಿನಗಳಲ್ಲಿ ತುಂಬಾ ಉಪಯೋಗವಿದೆ ಇದು ಕಬ್ಬು ಬೆಳೆಯುವ ರೈತರಿಗೆ ಹಾಗೂ ಸಕ್ಕರೆ ಕಾರ್ಖಾನೆಯವರಿಗೆ ಲಾಭದಾಯವಾಗಿದೆ. ಇಂತಹ ಒಂದು ಘಟಕವನ್ನು ಸ್ಥಾಪಿಸುತ್ತಿರುವುದಕ್ಕೆ ಆಡಳಿತ ಮಂಡಳಿಯವರಿಗೆ ನನ್ನ ಧನ್ಯವಾದಗಳು.

3. **ಶ್ರೀ ರಾಜು ಕಾನಡೆ: ಕೋಡನಿ ಗ್ರಾಮ.**

ನಾನು ಒಬ್ಬ ಸಣ್ಣ ರೈತ, ಮೊದಲನೆಯದಾಗಿ ನಾನು ಈ ಕಾರ್ಖಾನೆಯ ಎಲ್ಲಾ ಆಡಳಿತ ಮಂಡಳಿಗೆ ಚೇರ್ಮನ್ನರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಯಾಕೆಂದರೆ ಈ ಕಾರ್ಖಾನೆ ಒಂದು ಚಿಕ್ಕದಾಗಿತ್ತು, ಈಗ ದೊಡ್ಡದಾಗಿ ಬೆಳೆಯುತ್ತಿದೆ. ಆದರೆ ಈ ಕಾರ್ಖಾನೆಯಿಂದ, ಲಾಭ ಬಹಳ ಕಡಿಮೆ ಇತ್ತು, only ಶುಗರ್ ಮಾತ್ರ ತಯಾರ ಆಗುತಿತ್ತು, ಅದರಿಂದಾ ಕಾರ್ಖಾನೆಗೆ ಲಾಭ ಕಡಿಮೆ ಇತ್ತು. ಈಗ ಅವರು ಡಿಸ್ಟಿಲರಿ ಪ್ಲ್ಯಾಂಟನ್ನು ತಯಾರ ಮಾಡಲು ಯೋಚಿಸಿದ್ದಾರೆ. ಅದಕ್ಕೆ ಅವರಿಗೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಭಾಗದ ರೈತರಿಗೆ ಲಾಭ ಬೇಕಾದರೆ, ಈ ಕಾರ್ಖಾನೆಗೆ ಡಿಸ್ಟಿಲರಿ ಪ್ಲ್ಯಾಂಟ ಬೇಕು ಎಂದು ಹೇಳಿದರು.

4. **ಶ್ರೀ ಶಿವಗೇನಿ ಜುನಕೆ: ಜತ್ರಾಟ ಗ್ರಾಮ.**

ಈ ಭಾಗದಲ್ಲಿ ಬಹಳ ಚಿಕ್ಕದಾದ ಒಂದು ಕಾರ್ಖಾನೆ ಇತ್ತು, ಅದನ್ನು ಈ ಸಂಚಾಲಿತ ಮಂಡಳಿಯವರು ಬಂದ ನಂತರ 4000ಮೆಗಾ ವ್ಯಾಟ್ ಉತ್ಪಾದಿಸಲು ವಿದ್ಯುತ ಸಾಮರ್ಥ್ಯವನ್ನು ಹೆಚ್ಚಿಸಿದ್ದಾರೆ. ಅದೆ ರೀತಿ ಅದರ ಉಪ ಉತ್ಪನ್ನಗಳಾದಂತಹ ಈ ಡಿಸ್ಟಿಲರಿಯನ್ನು ಮಾಡಬೇಕು ಎನ್ನುವ ಒಂದು ಕಾರ್ಯಕ್ರಮ ಇದೆ. ಅದರಿಂದ ಕಾರ್ಖಾನೆಯ ಆರ್ಥಿಕ ಅಭಿವೃದ್ದಿ ಆಗುವುದರಿಂದ ಆ ಲಾಭ ನಮ್ಮ ರೈತ ಜನಾಂಗಕ್ಕೂ ಕೂಡಾ ಬಹಳ ಒಳ್ಳೆಯ ರೀತಿ ಆಗುತ್ತದೆ ಮತ್ತು ಈ ನಮ್ಮ ತಾಲೂಕು ಅಭಿವೃದ್ಧಿ ಆಗುತ್ತದೆ, ಅಂತ ಹೇಳಿದರು.

5. **ಶ್ರೀ ದೀಪಕ ಮ ಪಾಟೀಲ: ನಿಪ್ಪಾಣಿ.**

ನಾನು ಒಬ್ಬ ರೈತ ಬೆಳೆಗಾರರ ಕುಟುಂಬದಿಂದ ಬಂದವನು, ಪರಿಸರ ಪ್ರೇಮಗಳಿಗೆ ಮತ್ತು ಕಾರ್ಖಾನೆಯ ಸದಸ್ಯರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ಏಕೆಂದರೆ ಇಲ್ಲಿ ಒಂದು Distillery Unit ಆಗುವದರಿಂದ ಎನು Benefit ಆಗುತ್ತದೆ ಎಂದರೆ, ಒಂದು ಯುವಕರಿಗೆ ಉದ್ಯೋಗ ಅವಕಾಶ ಸಿಗುತ್ತದೆ. ಎರಡೇನೆಯದು, ರೈತರಿಗೆ ಬೆಳೆಗಳ ಉತ್ಪನ್ನ ಹೆಚ್ಚು ಮಾಡಲು ಅವರಿಗೆ ಲಾಭವಾಗುತ್ತದೆ. ಮೂರನೇಯದು, ಕರ್ನಾಟಕ ಸರ್ಕಾರಕ್ಕೆ ಆದಾಯ ಹೆಚ್ಚು ಆಗುವ ಅವಕಾಶ ಸಿಗುತ್ತದೆ ಮತ್ತು ಈ Unit ಗಾಗಿ ಯಾರು ಪ್ರಯತ್ನ ಮಾಡುತ್ತಿದ್ದಾರೆ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

6. **ಶ್ರೀ ಸಿದ್ದಗೌಡಾ ಈರಗೌಡಾ ಪಾಟೀಲ: ಗಳತಗಾ ಗ್ರಾಮ.**

ಈಗಾಗಲೇ ಬಹಳ ವಿಷಯಗಳನ್ನು ವ್ಯಕ್ತ ಪಡಿಸಿದ್ದಾರೆ. ಆ ವಿಷಯಗಳ ಬಗ್ಗೆ ವ್ಯಕ್ತಪಡಿಸಲು ಇಚ್ಛೆ ಪಡೆಯುವುದಿಲ್ಲ. ಒಂದು ಮನವಿಯನ್ನು ಮಾಡಿಕೊಳ್ಳುತ್ತೇದ್ದೆನೆ, ನಾವೂ ಕರ್ನಾಟಕ ರಾಜ್ಯದ ಕೊನೆಯ ಅಂಚಿನಲ್ಲಿ ಇರುವಂತಹ ಜನ, ಈ ಕಡೆಗೆ ಯಾವೂದೇ ಒಂದು Industry Area Expansion ಆಗಲಿಲ್ಲ. ಇಲ್ಲಿಯ ಜನ ಬಹಳ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. Industrial Area ಆಗಬೇಕು ಆದರೆ ಇದು Border Area ಇರುವದರಿಂದ, ಕರ್ನಾಟಕ ಸರ್ಕಾರ ಹೆಚ್ಚು ಮನಸ್ಸು ಮಾಡುತ್ತಿಲ್ಲ. ಅದಕ್ಕೆ ಇವತ್ತು ಒಂದು ಶುಗರ್ಸ ಕಾರ್ಖಾನೆಯವರು Distillery ಘಟಕವನ್ನು ತೆಗೆಯುತ್ತಿದ್ದಾರೆ. ಇದರಿಂದ ಸ್ವಲ್ಪ ಜನರಿಗೆ ಅನುಕೂಲವಾಗಬಹುದು, ನಿರೋದ್ಯೋಗ ಯುವಕರಿಗೆ ನೌಕರಿ ಸಿಗಬಹುದು ಅದರ ಜೊತೆಗೆ ರೈತರಿಗೆ By-Product ದಿಂದ ಅನುಕೂಲವಾಗುತ್ತದೆ. ಇದರಲ್ಲಿ ಪರಿಸರ ಮೇಲೆ, ಸ್ವಲ್ಪ ಪರಿಣಾಮ ಆಗಬಹುದು, ಅದಕ್ಕಿಂತ ನಮಗೆ ಹೆಚ್ಚು ಲಾಭ ಆಗುತ್ತದೆ ಎನ್ನುವ ವಿಷಯ ನಮ್ಮ ಗಮನಕ್ಕೆ ಬರುತ್ತದೆ. ಆದಕ್ಕಾಗಿ Industrial Area Development ಆಗಬೇಕು. ಇವತ್ತು ಬಂದಿರುವ ಈ ಒಂದು Distillery ಘಟಕದ ಪ್ರಸ್ತಾವನೆಯನ್ನು

ತಾವೂ ಮನಸ್ಸು ಮಾಡಿದಿರೆ ಈ Industryಗೆ ಅನುಕೂಲವಾಗುತ್ತದೆ, ಮತ್ತು ನಿರುದ್ಯೋಗ ಯುವಕರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಮ್ಮಲ್ಲಿ ಮನವರಿಕೆ ಮಾಡುತ್ತಾ, ತಾವೂ ಇದಕ್ಕೆ ಅನುಮತಿ ಕೊಡಬೇಕು ಎಂದು ವಿನಂತಿ ಮಾಡಿದರು.

7. **ಶ್ರೀ ಬಾಳಕೃಷ್ಣ ಚಲಕೆ: ಜತ್ರಾಟ ಗ್ರಾಮ.**
ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆಯು ಸಮೀಪದ ಮಹಾರಾಷ್ಟ್ರದ ಕಾರ್ಖಾನೆಗಳ ಜೊತೆ ಸ್ಪರ್ಧೆ ಮಾಡುವ ಪ್ರಯತ್ನ ಮಾಡುತ್ತಿದೆ. ಆದರೆ ಮೊದಲು ಮಹಾರಾಷ್ಟ್ರಗಳ ಕಾರ್ಖಾನೆಗಳ ಸಮನಾಗಿ ಬಿಲ್ಲು ಕೊಡಲು ಆಗುತ್ತಿರುತ್ತಿಲ್ಲ. ಈಗ ಕಾರ್ಖಾನೆಯು ಬಿಲ್ಲು ಕೊಡುತ್ತಿದೆ. ನಮ್ಮ ಕಬ್ಬಿನ ಉತ್ಪಾದನೆಗೆ ಅಂದರೆ FRP ಪ್ರಮಾಣದ ಬಿಲ್ಲು ಕೊಡುತ್ತವೆ, ಆದರೆ ಮಹಾರಾಷ್ಟ್ರದ ಕಾರ್ಖಾನೆಗಳು FRP ಪ್ರಮಾಣದ ಬಿಲ್ಲುಕ್ಕಿಂತ ಹೆಚ್ಚು 150–200 ರೂಪಾಯಿಗಳನ್ನು ಕೊಡುತ್ತವೆ. ಇದರ ಹಿಂದಿನ ಕಾರಣವೇನೆಂದರೆ, ಆ ಕಾರ್ಖಾನೆಗಳು ಇತರೆ ಉತ್ಪಾದನೆಗಳನ್ನು ಮಾಡುತ್ತವೆ. ಅದೇನೆಂದರೆ Distillery ದಂತಹ ಉತ್ಪಾದನೆ. ಅದನ್ನು ಈಗ ಇಲ್ಲಿ ಇವರು ಆರಂಭ ಮಾಡುತ್ತಿದ್ದಾರೆ. ಅದು ನಿಜವಾಗಿಯೂ ನಮಗೆ ಒಂದು ಅತ್ಯಂತ ಮಹತ್ವವಾದ ವಿಷಯವಾಗಿದೆ. ಸಮೀಪದ ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳ ಬೆಲೆಗೆ ಸಮಾನ ಬೆಲೆ ನಮಗೆ ಸಿಗುವುದಾದರೆ ಇದರ ಕಾರಣ ಈ ಗಡಿಭಾಗದಲ್ಲಿ 30 ರಿಂದ 40% ಕಬ್ಬು ಬರುತ್ತದೆ. ಅದು ಸಮೀಪದ ಮಹಾರಾಷ್ಟ್ರಕ್ಕೆ ಹೋಗುತ್ತಿತ್ತು. ಅದಕ್ಕೆ 200 ರೂಪಾಯಿ ಪ್ರತಿ ಟನ್‌ಗೆ ಬೆಲೆ ಹೆಚ್ಚು ಕೊಡುತ್ತಾರೆ. ಇದೆ ಬೆಲೆ ಹಾಲಸಿದ್ಧನಾಥ ಕಾರ್ಖಾನೆಯವರು ಕೊಡುತ್ತಾರೆ ಎಂದರೆ ಈ Project ನಮಗೆ ಬಹಳ ಅತ್ಯಾವಶ್ಯಕ ಇದೆ ಎಂದು ನನ್ನ ವಿನಂತಿ.

8. **ಶ್ರೀ ಸುದರ್ಶನ ಪಾಯಗೌಡಾ ಪಾಟೀಲ: ಖಡಕಲಾಟ ಗ್ರಾಮ.**
ಈ Project ಬಗ್ಗೆ ಅಧಿಕಾರಿಗಳು ಸವಿವರವಾಗಿ ಹೇಳಿದ್ದಾರೆ, ವಾಯು ಮಾಲಿನ್ಯ, ಶಬ್ಧ ಮಾಲಿನ್ಯ, ಅದೇ ರೀತಿ ಪರಿಸರದಲ್ಲಿ ಯಾವ ಪ್ರಕಾರದ ಪರಿಸರವನ್ನು ಬೆಳಿಸಿ ಪರಿಸರ ಸಂರಕ್ಷಣೆ ಮಾಡಬಹುದಾದ ಎಲ್ಲಾ ವಿವರವನ್ನು ಯೋಜನಾ ಅಧಿಕಾರಿಗಳು ಅವರು ಹೇಳಿದ್ದಾರೆ. ಈ ಯೋಜನೆಯಿಂದ ಕಾರ್ಖಾನೆಗೆ ಲಾಭವಾಗಿ, ಕಾರ್ಖಾನೆಯ ಕಚ್ಚಾ ವಸ್ತುಗಳನ್ನು ಸದುಪಯೋಗ ಪಡಿಸಿಕೊಂಡರೆ ಕಾರ್ಖಾನೆಯ ಆದಾಯ ಏರಿಕೆ ಆಗುತ್ತದೆ. ಈ ಕಾರ್ಖಾನೆಯ ಆದಾಯ ಏರಿಕೆ ಆಗುವುದರಿಂದ ನಮ್ಮ ಭಾಗದ ಪ್ರತಿ ರೈತರ ಕಬ್ಬು ಬೆಳೆಗಾರರಿಗೆ ಲಾಭ ಸಿಗುತ್ತದೆ. ಏಕೆಂದರೆ ಆ ಉತ್ಪಾದನೆಯಿಂದ ಬರುವಂತಹ ಲಾಭದಿಂದ ರೈತರಿಗೆ ಹೆಚ್ಚಿನ ಪ್ರಮಾಣದ ಬೆಲೆಯನ್ನು ಕೊಟ್ಟು ಕಾರ್ಖಾನೆಯನ್ನು ಉನ್ನತ ಮಟ್ಟಕ್ಕೆ ಏರಿಸಬಹುದಾಗಿದೆ. ಅದ್ದರಿಂದ ಈ 50,000 ಸಾಮರ್ಥದ Ethanol Distillery ಘಟಕಗೆ ಅನುಮೋದನೆ ಕೊಟ್ಟು ನಮ್ಮ ಭಾಗದ ಪರಿಸರದ ಅಭಿವೃದ್ಧಿ ಮಾಡಲು ಕೈಗೊಡಿಸಬೇಕೆಂದು ನನ್ನ ವಿನಂತಿ.

9. **ಶ್ರೀ ಕಲಗೌಡಾ ನೀಲಗೌಡಾ ಪಾಟೀಲ: ಬೆನ್ನಾಡಿ ಗ್ರಾಮ.**
ನಾನು ಒಬ್ಬ ರೈತ, ಕಾರ್ಖಾನೆಯ ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯವರಿಗೆ ಹೇಳುವುದೇನೆಂದರೆ, ಈ ಕಾರ್ಖಾನೆಯು ಗಡಿ ನಾಡಲ್ಲಿ ಇರುವ ಕಾರಣ, ಈ ಕಾರ್ಖಾನೆಯವರಿಗೆ ಹೆಚ್ಚಿನ ಬೆಲೆ ಯಾಕೆ ಕೊಡಲು ಸಾದ್ಯವಿಲ್ಲ ಅಂದರೆ ಇತರೆ ಉತ್ಪನ್ನಗಳ ಉತ್ಪಾದನೆಗಳನ್ನು ಮಾಡುತ್ತಿರುತ್ತಿಲ್ಲ. ಹೀಗಾಗಿ ಈ ಕಾರ್ಖಾನೆ ಹಿಂದೆ ಇರುತ್ತಿತ್ತು, ಈಗ ಮಾಡುತ್ತಿರುವ Project Distillery and Ethanol ಗೆ ಮಂಜೂರು ಮಾಡಬೇಕೆಂದು ವಿನಂತಿಸಿದರು.

10. **ಶ್ರೀ ರಾಹುಲ ಪಾಟೀಲ: ನಾಗನೂರ ಗ್ರಾಮ.**
ನಮ್ಮ ಸಕ್ಕರೆ ಕಾರ್ಖಾನೆ, ಬೆಳಗಾವಿ ಜಿಲ್ಲೆಯ ಅತ್ಯಂತ ಹಳೆಯ ಸಕ್ಕರೆ ಕಾರ್ಖಾನೆಯಾಗಿದೆ. ಆದರೆ ಈಗಿನ ವಿದ್ಯುತ್ ಉತ್ಪಾದನೆಯನ್ನು ಹೊರತುಪಡಿಸಿ ಅಂತಹ ಯಾವುದೇ ಸಹ–ಯೋಜನೆಯನ್ನು ಪ್ರಾರಂಭಿಸಲಾಗಿಲ್ಲ, ಏಕೆಂದರೆ ಸಕ್ಕರೆ ಕಾರ್ಖಾನೆಯ ಆರ್ಥಿಕ ಸ್ಥಿತಿಯ ಕಾರಣ ಅಂತಹ ಸಹ–ಯೋಜನೆಗಳನ್ನು ಪ್ರಾರಂಭಿಸುವ ಅವಶ್ಯಕತೆಯಿದೆ, ಅದು ಸ್ವಯಂಚಾಲಿತವಾದ ಬೆಳವಣಿಗೆ. ಅಂತಹ ಯೋಜನೆಯನ್ನು ನಮ್ಮಿಂದ ಪ್ರಾರಂಭಿಸಿದರೆ, ಸರ್ಕಾರವು ಅನುಮತಿ ನೀಡಿದರೆ, ನಮ್ಮ ಸಕ್ಕರೆ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿಗಳ ಬೆಳವಣಿಗೆಗೆ ಸ್ವಯಂಚಾಲಿತವಾಗಿ ಸಹಾಯವಾಗುತ್ತದೆ. ಈ ಡಿಸ್ಟಿಲರಿ ಯೋಜನೆಗೆ ಅನುಮತಿಯನ್ನು ನೀಡುವಂತೆ ನಿರ್ವಾಹಕರನ್ನು ಮತ್ತು ಸರ್ಕಾರವನ್ನು ಕೋರುತ್ತೇನೆ. ಸಕ್ಕರೆ ಕಾರ್ಖಾನೆಯ ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೆ ಸ್ವಯಂಚಾಲಿತವಾಗಿ ಎಲ್ಲಾ ರೈತರಿಗೆ ಸಹಾಯವಾಗುತ್ತದೆ ಎಂದು ತಿಳಿಸಿದರು.

**ಶ್ರೀ. ಜಗದೀಶ್. ಐ. ಎಚ್, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಚಿಕ್ಕೋಡಿ** ಇವರು ಮಾತನಾಡುತ್ತಾ ಶ್ರೀ. ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಇವರು ಶಂಕರಾನಂದ ನಗರ, ಯಮಗರ್ನಿ ಗ್ರಾಮ, ನಿಪ್ಪಾಣಿ, ನಿಪ್ಪಾಣಿ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕದಲ್ಲಿ ಹೊಸ 50 ಕೆಎಲ್‌ಪಿಡಿ ಸಾಮರ್ಥ್ಯದ ಮೊಲಾಸಿಸ್ ಆಧಾರಿತ ಡಿಸ್ಟಿಲರಿ(ಎಥೆನಾಲ್) ಸ್ಥಾವರವನ್ನು ಸ್ಥಾಪಿಸಲು ಉದ್ದೇಶವನ್ನು ಇಟ್ಟುಕೊಂಡು ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಗಳಿಗೆ ಸರ್ಕಾರದ ಮಟ್ಟದಲ್ಲಿ ಅನುಮತಿ ಪಡೆಯಬೇಕಾಗಿದ್ದು, ಅಂದರೆ ಭಾರತ ಸರ್ಕಾರದ ಅರಣ್ಯ ಪರಿಸರ ಮಂತ್ರಾಲಯದ ಗೇಜಟ್ ನೋಟಿಫಿಕೇಶನ್ 14-09-2006ಗೆ EIA Notification ಪ್ರಕಾರ ಪರಿಸರ ವಿಮೋಚಾನಾ ಪತ್ರವನ್ನು ಪಡೆಯುವುದು ಕಡ್ಡಾಯವಾಗಿದೆ. ಪರಿಸರ ವಿಮೋಚನಾ ಪತ್ರವನ್ನು ನೀಡುವ ಮೊದಲು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿ ಸಾರ್ವಜನಿಕರ ಆಲಿಕೆಗಳನ್ನು ದಾಖಲಿಸಬೇಕು. ಇದು EIA Notificationದ ಒಂದು ಭಾಗವಾಗಿರುತ್ತದೆ. ಆ ಹಿನ್ನಲೆಯಲ್ಲಿ ನಾವು ತಮ್ಮೆಲ್ಲರ ಅಭಿಪ್ರಾಯವನ್ನು ಪಡೆಯಲು, ಪರಿಸರ ಸಾರ್ವಜನಿಕ ಸಭೆಯನ್ನು ಏರ್ಪಾಡು ಮಾಡಿದ್ದೇವೆ. ಈ ವಿಷಯ 30 ದಿವಸ ಮುಂಚಿತವಾಗಿ ಪ್ರಮುಖ ದಿನಪತ್ರಿಕೆಗಳ ಮುಖಾಂತರ ಪ್ರಕಟಣೆ ಮಾಡಿ ಈ ಜಾಗದಲ್ಲಿ ಪರಿಸರ ಕುರಿತು ಸಾರ್ವಜನಿಕ ಸಭೆಯನ್ನು ಮಾಡುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು, ಎಕ್ಸಿಕ್ಯುಟಿವ್ ಸಮರಿಗಳನ್ನು, ಸಾರ್ವಜನಿಕರ, ಗ್ರಾಮಸ್ಥರ ಪರಾಮರ್ಶೆಗಾಗಿ ಮತ್ತು ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ವಿವಿಧ ಕಛೇರಿಗಳಲ್ಲಿ ಇಡಲಾಗಿತ್ತು. ಈ 30 ದಿನಗಳಲ್ಲಿ ನಮಗೆ ಲಿಖಿತ ರೂಪದಲ್ಲಿ ಅಥವಾ ಇಮೇಲ್ ಮುಖಾಂತರ ನೀಡಲು ಆಗಲಿಲ್ಲದವರೂ ಸಹ, ಇಂದು ಈ ಸಭೆಯಲ್ಲಿ ಭಾಗವಹಿಸಿ ಅಭಿಪ್ರಾಯಗಳನ್ನು ನಿರ್ಭಯವಾಗಿ, ನಿರ್ಭೀತಿಯಿಂದ ತಿಳಿಸಬೇಕು ಎನ್ನುವ ಮುಖ್ಯವಾದ ಉದ್ದೇಶ ಈ ಪರಿಸರ ಸಾರ್ವಜನಿಕ ಸಭೆಯದ್ದಾಗಿರುತ್ತದೆ. ಈವತ್ತು ತಾವು ಏನು ಅಭಿಪ್ರಾಗಳನ್ನು ವ್ಯಕ್ತಪಡಿಸಿದ್ದೀರಿ, ಅದನ್ನು ನಾವು proceedings ನಲ್ಲಿ ದಾಖಲೆ ಮಾಡಿ, ಅದರ ಜೊತೆಗೆ ಇದರ video recording, audio recording ಸಹಾ ಆಗುತ್ತಾ ಇದೆ. ಅದನ್ನು ಸಹ ತಾವು ವ್ಯಕ್ತಪಡಿಸಿದ ಅಭಿಪ್ರಾಯಗಳ ಜೊತೆಗೆ ಕ್ರೋಢೀಕರಿಸಿ ಮುಂದಿನ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನಾವು ಕಳುಹಿಸಿಕೊಡುತ್ತೇವೆ. ಅವರು ಈ ಯೋಜನೆಯ ಬಗ್ಗೆ ತೀರ್ಮಾನವನ್ನು ಕೈಗೊಳ್ಳುತ್ತಾರೆ.

**ಶ್ರೀ. ಅಶೋಕ ದುಡಗುಂಟಿ, ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ** ಇವರು ಮಾತನಾಡುತ್ತಾ ಶ್ರೀ. ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್, ಇವರು ಶಂಕರಾನಂದ ನಗರ, ಯಮಗರ್ನಿ ಗ್ರಾಮ, ನಿಪ್ಪಾಣಿ, ನಿಪ್ಪಾಣಿ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕದಲ್ಲಿ ಹೊಸ 50 ಕೆಎಲ್‌ಪಿಡಿ ಸಾಮರ್ಥ್ಯದ ಮೊಲಾಸಿಸ್ ಆಧಾರಿತ ಡಿಸ್ಟಿಲರಿ(ಎಥೆನಾಲ್) ಸ್ಥಾವರವನ್ನು ಸ್ಥಾಪಿಸಲು ಉದ್ದೇಶಿಸಿರುವ ಕುರಿತು ಪರಿಸರ ಸಾರ್ವಜನಿಕರ ಆಲಿಕೆ ಸಭೆಗೆ ಸಂಬಂಧ ಪಟ್ಟಂತೆ Environment consultant ರವರು ವಿವರವಾಗಿ explain ಮಾಡಿದ್ದಾರೆ. ಅದೇ ರೀತಿಯಾಗಿ 10 ಜನ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಿರಿ. ಈ ಒಂದು ಯೋಜನೆಯ ಬಗ್ಗೆ ಹಾಗೂ ಸಾರ್ವಜನಿಕ ಆಲಿಕೆ ಸಭೆಯಲ್ಲಿ ವ್ಯಕ್ತಪಡಿಸಿದಂತಹ ಅನಿಸಿಕೆಗಳನ್ನು ಈಗಾಗಲೇ videography ಮಾಡಲಾಗಿದೆ ಅದರ ಜೊತೆಗೆ ತಾವು ವ್ಯಕ್ತಪಡಿಸಿದ ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸುತ್ತೇವೆ.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

(ಶ್ರೀ. ಅಶೋಕ ದುಡಗುಂಟಿ. ಕ.ಆ.ಸೇ.)
**ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ**
**ದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ**
**ಆಲಿಕೆ ಸಭೆ ಅಧ್ಯಕ್ಷರು ಬೆಳಗಾವಿ, ಕರ್ನಾಟಕ**

**Proceeding of the Public Hearing of M/s. Shree Halasiddhanath Sahakari Sakhari Karkhana Limited, shankaranand Nagar, Yamgarni-Village Nippani, Nippani Taluk, Belagavi District, Karnataka State, proposed New Molasses based 50 KLPD distillery unit (Ethanol). In this regard Public Hearing is conducted on 16-07-2020 at 11.00 AM at industry premises Yamgarni-village Nippani.**

**Date** : 16-07-2020.

**Time** : 11.00 AM

**Venue** : M/s. Shree Halasiddhanath Sahakari Sakhari Karkhana Shankaranand Nagar, Yamgarni-Village, Nippani, Nippani Taluk, Belagavi District.

M/s. Shree Halasiddhanath Sahakari Sakhari Karkhane Limited, Shankaranand Nagar, Yamgarni-Village Nippani, Nippani Taluk, Belagavi District, Karnataka State, proposed New Molasses based 50 KLPD distillery unit (Ethanol). In this regard Public Hearing was conducted on 16-07-2020 at 11.00 AM. The Proceedings of the public hearing is as under:

| | | |
|---|---|---|
| Name & Address of the Proposed Industry | : | M/s. Shree Halasiddhanath Sahakari Sakhari Karkhana Shankaranand Nagar, Yamgarni-Village, Nippani, Nippani Taluk, Belagavi District |
| Name of the Officers Present | : | Annexure - 1 |
| Representatives of the Proposed Industry Present | : | Annexure - 2 |
| Details of Public Participated | : | Annexure – 3 |
| Details of publication arranged in the News Papers for public hearing | : | Annexure – 4 |
| Power Point Presentation made in the Public hearing | : | Annexure - 5 |

As per the Notification issued by the Ministry of Environment, Forest and Climate Change, Government of India on 14.09.2006 (amended to date 01.12.2009), it is a pre requisite for such project to conduct Environment public hearing prior to award of Environment Clearance Certificate. Accordingly Director, MoEF, GOI has finalized the standards terms of Reference of the said project vide letter dated: 29-11-2018 and informed **M/s. Shree Halasiddhanath Sahakari Sakhari Karkhana Shankaranand Nagar, Yamgarni-Village Nippani, Nippani Taluk, Belagavi District** to request KSPCB to conduct Environment public hearing. The project proponent vide letter Dated 25-11-2019 requested KSPCB to conduct public hearing. Hence the Environment Public Hearing is conducted at the project site by the Karnataka State Pollution Control Board under the Chairmanship of Additional Deputy Commissioner and Additional District Magistrate, Belagavi.

The project proponent has submitted the detailed EIA report and Executive Summary in Kannada and English to the Karnataka State Pollution Control Board. As per the Environmental Impact Assessment Notification, the Karnataka State Pollution control Board gave the Press Notification 30 days in an advance. The advertisement to this effect was published in "Indian Express" English daily news paper dated: 16-06-2020 and Kannada daily news paper "Vijay Vani" and Local news paper "Kannadamma" news paper dated: 18-06-2020. The suggestions/ views, comments and objections from the interested bona fide residents, environmental groups and others located at the project site likely to be affected by the proposed project were invited and project affected people could send their views either orally or in written or through email to Karnataka State Pollution Control Board/ Deputy commissioner, Belagavi, Chairman, Environment Public Hearing Committee.

The Environment public hearing was held on 16-07-2020 under the chairmanship of Additional Deputy Commissioner & Additional District Magistrate, Belagavi District, Belagavi.

Sri Jagadeesh I H, Environmental Officer, Karnataka State Pollution Control Board, Belgaum–2(Chikkodi) extended warm welcome to Sri Ashok Dudagunti, Additional Deputy Commissioner & Additional District Magistrate, Belagavi, Tahasildar Nippani and he has also extended the welcome to all officials of the different Departments, representatives of the project, all surrounding villagers, public, media and environmentalists.

He briefly explained the need for Environmental clearance from the Ministry of Environment, Forest and Climate Change, Government of India and Environmental Public Hearing as per EIA Notification and explained the procedure of the Public hearing and about the project documents kept for the Public Hearing at Ten different offices.

The Environmental Officer requested to the Additional Deputy Commissioner & Additional District Magistrate, Belagavi and also the Presiding officer of the Environment Public Hearing to start the proceedings. Later instructed the industry representative and their consultants to make the presentation about the proposed project of M/s. Shree Halasiddhanath Sahakari Sakhari Karkhana Shankaranand Nagar, Yamgarni-Village, Nippani, Nippani Taluk, Belagavi District to the public.

Industry representative and Environment Consultant of M/s VASANTDADA SUGAR INSTITUTE, Manjari (BK), Pune, Maharashtra, for the project explained the environmental impacts and mitigation measures recommended for the proposed project of M/s. Shree Halasiddhanath Sahakari Sakhari Karkhana Shankaranand Nagar, Yamgarni-Village, Nippani, Nippani Taluk, Belagavi District. The copy of the power point presentation is also enclosed with the proceedings vide **Annexure–5.**

**The views expressed by the public are as follows:**

1. **Shri Subhash Magadum: Resident of Adi.**
   In this public Hearing meeting, I appreciate the proposal made by the industry and its management. Establishment of this distillery unit will earn 90% profit. In addition it helps to protect the interest of the farmers. If the 50 KLPD distillery is established with latest technology of incineration boiler, I feel that complete development, production will take place. The establishment of this unit will also provide employment to our local youth. In addition, the

installation of this unit will produce ethanol and therefore will not be a problem. I request on behalf of all to facilitate the establishment of distillery unit.

2. **Shri Omkar Patil: Resident of Rampur.**
   I would like to thank the management of Factory for establishing this 50KLPD Distillery Unit. This 50KLPD distillery unit will be of great use in future and also helps to sugarcane growing farmers and sugar mills. Thanks to the management committe for establishing such a unit.

3. **Shri Raju Kanade: Resident of Kodani.**
   I am being a small farmer; first of all I would like to congratulate the Chairman and all the management of this factory. Because earlier the factory was a small unit, it is now expanding. But from this existing factory, the profit was very less as only sugar was manufactured, which made the factory less profitable. Now they are thinking of establishment of distillery plant. I congratulate them for that. If the farmers of this area want to earn profit, the factory needs a distillery plant.

4. **Shri. Shivgeni Junake: Resident of Jatrat.**
   There was one small factory in this area. After that present Board Members improved electricity production capacity to 4000 Mw. Similarly, there is a proposal of "Distillery" produce by-products and also this will be helpful to our Taluk development. So the economic status of the industry will improve and in turn farmers community will be benefited.

5. **Shri Deepak M. Patil: Resident of Nipani.**
   I come from a farmer family, I would like to thank environmentalists and industrial members. A benefit of establishment of this distillery unit is, it helps youths to get an employment. Secondly, farmers will have benefit of producing more crops. Thirdly, Karnataka Government will have a chance to increase revenue and lastly I would like to thank all those who are trying for this unit.

6. **Shri. Siddgouda Iragouda Patil: Resident of Galataga.**
   Many things have already been expressed I do not want to repeat those things. I have request that we are on the verge of the end of the state of Karnataka, there is no expansion of any Industry at this place. The people here are experiencing a lot of troubles. Industrial area should be established, but the Government of Karnataka is not showing interest to do as it is border area. Now the sugar mill is proposing distillery unit and it will benefit some people, as it help unemployed youth and benefit farmers through by product. It has come to the notice that it has little effect on the environment and benefits us more. That's why Industrial Area Development has to take place. I request you to approve the proposal of the Distillery Unit, which would benefit the industry and the unemployed youth.

7. **Shri Balakrishn Chalake: Resident of Jatrat.**
   Haalsiddhanath Co-operative Sugar Factory trying to compete with the nearby industries of Maharashtra. But it was not able to pay the bills in par with Maharashtra's factories. Now the factory is paying the bills. For our sugarcane crop, paying bills according to FRP standard, whereas factories in Maharashtra

pay 150-200 rupees more than FRP. The reason behind this is that those factories produce other products. That is production from Distillery, which is now being started here. That is really very important thing for us. If we can get the payment for sugarcane equal to Maharashtra factories, then from surrounding border area approximately 30-40% of sugar cane will come instead of nearest Maharashtra factories. For that they pay 200 rupees extra per ton. If the same is paid by Haalsiddanath factory, then we will have no objection and I feel this project is very essential for us.

8. **Shri. Sudarshan Paygouda Patil: Resident of Khadaklat.**
Officials have elaborated on the project and also told about air pollution and noise pollution, as well as what kind of environment can be developed and protected. By this project the factory's profit will be increased if they utilize raw materials of the factory, then industrial income will also increase. If the income of this factory increase, then it will benefit the every sugarcane growers of this area. Because, from the profits coming from that production, industry can pay more to the farmers and also it will help in the growth of factory. Therefore, I request you to approve this 50000 capacity Ethanol Distillery Unit and to help towards the development of our environment.

9. **Shri Kalagouda Nilgouda Patil : Resident of Bennadi.**
I being a farmer, I would like to bring in notice to the chairman and management that this factory was not able to pay the higher price because as it was not producing any other by products. So the industry is lagging behind. I request you to grant the permission for the establishment of distillery project.

10. **Shri Rahul Patil: Resident of Naganur.**
Our sugar Factory is the oldest sugar Factory in Belagavi district. But no such project–other than the power generation was started. Now a days it is necessary to start such co projects to improve economical conditions of sugar industry. If such projects are started & government gives permission, it will automatically help to improve financial conditions of our sugar factory. I request to the government to give permission for this distillery unit. If sugar factory financial condition is good, then automatically all farmers will be benefited.

**Shri Jagadish I. H. Environmental officer, Regional office, Chikodi** expressed that M/s. Haalsiddhanath Co-op Sugar Factory Ltd. of Shankaranand Nagar, Yamagarni Village, Nipani, Nipani Taluk Belagavi Has submitted proposal to the government with the intention of establishing a 50KLPD capacity molasses based distillery (ethanol) plant. These proposals have to be approved at the Government level, which means that it is mandatory to obtain an environmental clearance certificated as per the EIA Notification dated 14-09-2006, of MOEF & CC. The Environmental Public Hearing Meeting need to be conducted to collect opinion of the public before considering issue of the Environmental Clearance Certificate and it is a part of the EIA Notification with this background, we have arranged the environmental public hearing meeting to collect opinion of the public. We have published paper notification of conducting meeting 30 days in advance through leading newspapers and as per that we are conducting a environmental public hearing meeting at this place. All relevant documents

and executive summaries were kept in different offices for public, villagers for review and to get more information. The main purpose of this environmental public meeting is to ensure that who have failed to submit written opinions or via E-mail within 30 days, shall also participate and express their opinion without any fear and hesitation. Today what all you have expressed will be recorded in proceedings along with Video and Audio recording. Expressed opinions will be collected, consolidated and same is sent to the Government to take further action in this regard. They take a decision on this project.

**Shri Ashok Dudgunti, Additional Deputy Commissioner & Additional District Magistrate, Belagavi,** informed that, M/s. Haalsiddhanath Co-op Sugar Factory Ltd. of Shankaranand Nagar, Yamagarni Village, Nipani, Nipani Taluk Belagavi have proposed to set up a new 50 KLPD capacity Molasses based Distillery (Ethanol) and regarding this Environmental Public Hearing Meeting is conducted. Environment Consultants have explained about project in detail. Similarly 10 people have expressed their views. Those expressed views are already video recorded and views expressed by you will be consolidated and submitted to the Government.

Meeting concluded with vote of thanks.

**(Sri. Ashok Dudagunti, K.A.S.)**
**Additional Deputy Commissioner &**
**Additional District Magistrate &**
**Environmental Public Hearing President**